2018 ರಣಕಣ
ವಿಶ್ವವಾಣಿ
13-02-2018
ಮಂಗಳವಾರ

ಮಾತು ಕಟ್ಟೆ

ಕಾವೇರಿ ಸಮಸ್ಯೆ ಬಂದಾಗ ಸರ್ವಪಕ್ಷ ಸಭೆ ಬಹಿಷ್ಕರಿಸಿದ ಬಿಜೆಪಿ ರೈತರ ಸಮಸ್ಯೆ ಕುರಿತು ನಿರ್ಲಕ್ಷ್ಯ ತೋರಿದ್ದನ್ನು ರೈತರು ನೋಡಿದ್ದಾರೆ. ಮಹದಾಯಿ ಕುರಿತು ಗೋವಾ ಸಿಎಂ ಮನೋಹರ್ ಪರಿಕ್ಕರ್ ಹತ್ತಿರ ಪತ್ರ ಬರೆಸಿ ಬಿಜೆಪಿಯವರು ನಾಟಕ ಮಾಡಿದರು. ರೈತರ ಬಗ್ಗೆ, ರೈತರ ಸಮಸ್ಯೆ ಬಗ್ಗೆ ಚುನಾವಣೆ ಹೊಸ್ತಿಲಲ್ಲಿ ಮೊಸಳೆ ಕಣ್ಣೀರು ಸುರಿಸುವುದನ್ನು ಬಿಟ್ಟು ಮಹದಾಯಿ ಹಾಗೂ ರೈತರ ಸಾಲ ಮನ್ನಾ ಕುರಿತು ರಾಜ್ಯದ ಬಿಜೆಪಿ ನಾಯಕರು ಪ್ರಧಾನಿ ಮೋದಿ ಮನೆ ಎದುರು ಧರಣಿ ನಡೆಸಿ ರಾಜ್ಯಕ್ಕೆ ನ್ಯಾಯ ಕೊಡಿಸಲಿ. **-ರಾಮಲಿಂಗಾರೆಡ್ಡಿ** ಗೃಹ ಸಚಿವ

@vishwavaninews vishwavanitimely epaper.vishwavani.news vishwavani.news

ಸಣ್ ಸುದ್ದಿ

ಕಾಂಗ್ರೆಸ್ ಎಲ್ಲ ವರ್ಗದ ಪಕ್ಷ

ಆನೇಕಲ್: ನೂರಾರು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್‌ನಲ್ಲಿ ಎಲ್ಲರನ್ನು ಜಾತಿ, ಭೇದ ಮರೆತು ಬೆಳೆಸುತ್ತಿದ್ದೇವೆ, ಕಾಂಗ್ರೆಸ್ ಒಂದು ಜಾತಿಯ ಪಕ್ಷವಲ್ಲ, ಎಲ್ಲ ವರ್ಗದವರನ್ನು ಬೆಳೆಸಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದು ಸಂಸದ ಡಿ.ಕೆ.ಸುರೇಶ್ ಹೇಳಿದರು. ಜಿಗಣಿಯ ಕಾಂಗ್ರೆಸ್ ಯುವ ಮುಖಂಡ ಆರ್.ಪುನೀತ್ ಅವರನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿ, ಆದೇಶ ಪತ್ರ ನೀಡಿದ ನಂತರ ಮಾತನಾಡಿದ ಡಿ.ಕೆ.ಸುರೇಶ್ ಯುವಕರು ಕಾಂಗ್ರೆಸ್‌ಗೆ ಆದ್ಯತೆ ನೀಡಬೇಕು, ರಾಜ್ಯ ಸರಕಾರದ ಯೋಜನೆಗಳನ್ನು ಬಡವರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದರು. ಸಂಸದ ಡಿ.ಕೆ.ಸುರೇಶ್‌ರವರು ದಕ್ಷಿಣ ಕ್ಷೇತ್ರದಲ್ಲಿ ಕೆಲಸ ಮಾಡಲು ಹೆಚ್ಚಿನ ಜವಾಬ್ದಾರಿ ನೀಡಿದ್ದಾರೆ, ಈ ಜವಾಬ್ದಾರಿಯನ್ನು ಪಕ್ಷದ ಸಂಘಟನೆಗೆ ಮೀಸಲಿಟ್ಟು, ಮುಂಬರುವ ಚುನಾವಣೆಯಲ್ಲಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯನ್ನುಗೆಲ್ಲಿಸಲು ಹೆಚ್ಚಿನ ಸಮಯ ಮೀಸಲಿಡುವುದಾಗಿ ಆರ್.ಪುನೀತ್ ಹೇಳಿದರು. ಈ ವೇಳೆ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಉಪಾಧ್ಯಕ್ಷ ನಟರಾಜ್, ಗೋಯಲ್, ಚಂದ್ರು, ಕೇಶವರೆಡ್ಡಿ ಇದ್ದರು.

ಕಾಂಗ್ರೆಸ್ ಟಿಕೆಟ್ ಗೊಲ್ಲರಿಗೆ ನೀಡಲಿ

ಚಿತ್ರದುರ್ಗ: ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ಅವಕಾಶ ನೀಡುವಂತೆ ಪಕ್ಷದ ವರಿಷ್ಠರನ್ನು ಕೇಳಿದ್ದೇನೆ ಎಂದು ಚಳ್ಳಕೆರೆಯ ಸಿ. ವೀರಭದ್ರಬಾಬು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಪ್ಪತ್ತು ವರ್ಷಗಳಿಂದಲೂ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ಅಕ್ರಮ ಗಣಿಗಾರಿಕೆ ವಿರುದ್ಧ ಸಿದ್ದರಾಮಯ್ಯನವರು ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ನಡೆಸಿದಾಗ ಯಶಸ್ವಿಗೊಳಿಸಲು ಶ್ರಮಿಸಿದ್ದೇನೆ. ಕ್ಷೇತ್ರದ ಎರಡು ಲಕ್ಷ ಮತದಾರರಲ್ಲಿ ಗೊಲ್ಲರ ಮತಗಳು 25 ಸಾವಿರದಷ್ಟಿರುವುದರಿಂದ ಗೊಲ್ಲರಿಗೆ ಟಿಕೆಟ್ ನೀಡಬೇಕು ಎಂದರು. 25 ವರ್ಷಗಳಿಂದ ಸಕ್ರಿಯ ಸದಸ್ಯನಾಗಿ ಕಾಂಗ್ರೆಸ್‌ನಲ್ಲಿ ದುಡಿಯುತ್ತಿದ್ದೇನೆ. 1999, 2004 ರಲ್ಲಿ ವಿಧಾನಸಭಾ ಚುನಾವಣೆಗೆ ಸ್ಪರ್ಧಾಕಾಂಕ್ಷಿಯಾಗಿದ್ದು, ಟಿಕೆಟ್ ಕೇಳಿದ್ದೆ. ಆಗ ಹೈಕಮಾಂಡ್ ನನಗೆ ನೀಡಲಿಲ್ಲ. ಎಂಎಲ್‌ಸಿ ಚುನಾವಣೆಗೆ ಸ್ಪರ್ಧಿಸಬೇಕಿತ್ತಾದರೂ ಆಗಲಿಲ್ಲ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಕುರಿತು ಮುಖಂಡರ ಜತೆ ಮಾತನಾಡಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಜಿ.ಪರಮೇಶ್ವರ್ ಟಿಕೆಟ್ ನೀಡುವ ಭರವಸೆ ಕೊಟ್ಟಿರುವುದರಿಂದ ಇಂದಿನಿಂದಲೇ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಸುತ್ತಾಡುತ್ತೇನೆ ಎಂದು ತಿಳಿಸಿದರು. ಕ್ಷೇತ್ರದ 22 ಗ್ರಾಪಂ ಹಾಗೂ ನಗರದ 35 ವಾರ್ಡ್‌ಗಳಲ್ಲಿ ಸುತ್ತಾಡಿ ಮತದಾರರನ್ನು ಸಂಪರ್ಕಿಸುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಆಂಜನೇಯ, ಸಂಸದ ಬಿ.ಎನ್.ಚಂದ್ರಪ್ಪ ಹಾಗೂ ಜಿಲ್ಲೆಯ ಎಲ್ಲ ಕಾಂಗ್ರೆಸ್ ಶಾಸಕರು ಬೆಂಬಲ ಸೂಚಿಸಿದ್ದಾರೆ. ಹೈಕಮಾಂಡ್ ನನಗೆ ನೀಡಿದರೆ ಸಂತೋಷ ಎಂದರು.

ಬಿಎಸ್‌ಪಿ ಅಭ್ಯರ್ಥಿಗೆ ಸಹಕಾರ: ಮಂಜುನಾಥ್

ಆನೇಕಲ್: ರಾಜ್ಯದಲ್ಲಿ ಜೆಡಿಎಸ್, ಬಿಎಸ್‌ಪಿ ಜತೆ ಹೊಂದಾಣಿಕೆ ಮಾಡಿಕೊಂಡಿದ್ದು ತಾಲೂಕಿನಲ್ಲಿ ನಾವು ಬಿಎಸ್‌ಪಿಗೆ ಸಹಕಾರ ನೀಡಲಿದ್ದೇವೆ ಎಂದು ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಗೊಟ್ಟಿಗೆರೆ ಮಂಜುನಾಥ್ ಹೇಳಿದರು. ಪಕ್ಷದ ಕಾರ್ಯಕರ್ತರ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಬಿಎಸ್‌ಪಿ 40 ಸ್ಥಾನ ಬೇಡಿಕೆ ಇಟ್ಟಿದ್ದು, ಅದರಲ್ಲಿ 20 ಸ್ಥಾನವನ್ನು ಜೆಡಿಎಸ್ ವರಿಷ್ಠರು ಬಿಟ್ಟುಕೊಟ್ಟಿದ್ದಾರೆ. ಅದರಲ್ಲಿ ಪ್ರಮುಖವಾಗಿ ಆನೇಕಲ್ ಕ್ಷೇತ್ರ ಬೇಡಿಕೆ ಇಟ್ಟಿದ್ದರಿಂದ ಅನಿವಾರ್ಯವಾಗಿ ಬಿಡಬೇಕಾಯಿತು. ಕುಮಾರಸ್ವಾಮಿಯವರನ್ನು ಸಿಎಂ ಮಾಡುವ ಉದ್ದೇಶದಿಂದ ಈ ನಿರ್ಧಾರವನ್ನು ತೆಗೆದು ಕೊಂಡಿದ್ದೇವೆ. ನಾವೆಲ್ಲರೂ ಸೇರಿ ದೇವೇಗೌಡ ಹಾಗೂ ಎಚ್‌ಡಿಕೆಯವರ ಕೈ ಬಲಪಡಿಸಬೇಕಿದೆ. ಈ ನಿಟ್ಟಿನಲ್ಲಿ ಬಿಎಸ್‌ಪಿ ಗೆಲುವು ಸಾಧಿಸಲು ನಾವು ಶ್ರಮಿಸುತ್ತೇವೆ ಎಂದರು. ಜೆಡಿಎಸ್ ಟಿಕೆಟ್ ಆಕಾಂಕ್ಷಿ ಕೆ.ಪಿ.ರಾಜು ಮಾತನಾಡಿ, ವರಿಷ್ಠರು ಆನೇಕಲ್ ಕ್ಷೇತ್ರವನ್ನು ಬಿಎಸ್‌ಪಿಗೆ ಬಿಟ್ಟುಕೊಟ್ಟಿದ್ದು, ಮುಂದಿನ ದಿನಗಳಲ್ಲಿ ನಾನು ಪಕ್ಷ ಸಂಘಟನೆಯನ್ನು ಮಾಡಿ, ಬಿಎಸ್‌ಪಿ ಗೆಲುವಿಗೆ ಶ್ರಮಿಸುತ್ತೇನೆ. ಪಕ್ಷದ ಮುಖಂಡರು, ಕಾರ್ಯಕರ್ತರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ರೈತರ ಸಮಸ್ಯೆ ಪರಿಹರಿಸಲು ವಿಫಲ

ಗೋಣಿಕೊಪ್ಪಲು: ರೈತರ ಸಮಸ್ಯೆಗೆ ಸ್ಪಂದಿಲು ವಿಫಲವಾದ ಕಾಂಗ್ರೆಸ್ ಸರಕಾರ ರೈತರ ಸಮಾಧಿಯ ಮೇಲೆ ಸಾಧನಾ ಸಮಾವೇಶವನ್ನು ಆಯೋಜನೆ ಮಾಡುತ್ತಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಸಂಕೇತ್ ಪೂವಯ್ಯ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರದ ಆಡಳಿತಾವಧಿಯಲ್ಲಿ ರೈತರು ಆತ್ಮಹತ್ಯೆ ಸಂಖ್ಯೆ ಹೆಚ್ಚಾಗಿರುವುದು ಸರಕಾರದ ವೈಫಲ್ಯವನ್ನು ಎತ್ತಿ ತೋರಿಸುತ್ತಿದೆ. ಜಿಲ್ಲೆಗೆ ಉತ್ತಮ ಉಸ್ತುವಾರಿ ಸಚಿವರನ್ನು ನೇಮಿಸಲು ಸಾಧ್ಯವಾಗಿಲ್ಲ, ಇದುವರೆಗೆ ಐವರು ಉಸ್ತುವಾರಿ ಸಚಿವರನ್ನು ಬದಲಾಯಿಸಲಾಗಿದೆ. ಜಿಲ್ಲೆಗೆ ಆಗಮಿಸಿದ ಯಾವುದೇ ಉಸ್ತುವಾರಿ ಸಚಿವರಿಗೆ ಸೇವಾ ಮನೋಭಾವ ಇಲ್ಲ. ಸ್ಪಂದನೆ ಸಿಗದ ಮೇಲೆ ಜನರ ಸಮಸ್ಯೆಗೆ ಪರಿಹಾರ ದೂರದ ಮಾತು. ರಾಷ್ಟ್ರೀಯ ಪಕ್ಷಗಳಿಂದ ಆಯ್ಕೆಯಾದ ಶಾಸಕರಿಂದ ಯಾವ ಪ್ರಯೋಜನವೂ ಆಗಿಲ್ಲ. ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳು ಕೆಲಸ ಮಾಡುತ್ತಿಲ್ಲ ವಿರೋಧ ಪಕ್ಷದವರು ಪ್ರಶ್ನೆ ಮಾಡುತ್ತಿಲ್ಲ ಎಂದರು.

ಬರದ ನಾಡಲ್ಲಿ ಹೆಚ್ಚಿದ ಕಾಂಗ್ರೆಸ್-ಬಿಜೆಪಿ ಬಲಾಬಲ | ಜೆಡಿಎಸ್‌ನಲ್ಲಿ ಆಕಾಂಕ್ಷಿಗಳೇ ಇಲ್ಲ!

ಯಾರಾಗಲಿದ್ದಾರೆ ಬರದನಾಡಿನ ಬಹದ್ದೂರ್?

ಗಣೇಶ್ ಕಮ್ಮಾಪುರ ದಾವಣಗೆರೆ

ಬಹುತೇಕ ಬರಗಾಲವನ್ನೇ ಕಂಡಿರುವ ಕ್ಷೇತ್ರ ಜಗಳೂರು ತಾಲೂಕಿನಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್-ಬಿಜೆಪಿ ಜಿದ್ದಾಜಿದ್ದಿ ಪೈಪೋಟಿಗೆ ಮಾತ್ರ ಎಂದಿಗೂ ಬರ ಬಂದಿದ್ದೇ ಇಲ್ಲ. ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಈ ಕ್ಷೇತ್ರದಲ್ಲಿ ಚುನಾವಣಾ ಕಾವು ಭರ್ಜರಿಯಾಗಿಯೇ ಆರಂಭಗೊಂಡಿದೆ.

ಬರದ ನಾಡು ಜಗಳೂರು ಕ್ಷೇತ್ರದ ಚುನಾವಣೆ ಒಂದು ಕಾಲದಲ್ಲಿ ಕಾಂಗ್ರೆಸ್ ಸರಕಾರವನ್ನೇ ಅಲ್ಲೋಲ ಕಲ್ಲೋಲ ಮಾಡಿತ್ತು. 2008ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎಸ್.ವಿ.ರಾಮಚಂದ್ರಪ್ಪ ಅವರನ್ನು ಆಪರೇಷನ್ ಕಮಲ ಮೂಲಕ ಬಿಜೆಪಿ ಪಕ್ಷಕ್ಕೆ ಸೆಳೆದು, ಬೈ ಎಲೆಕ್ಷನ್ ಮಾಡಿ ಮತ್ತೊಮ್ಮೆ ಬಿಜೆಪಿಯಿಂದ ಗೆಲ್ಲಿಸಿ, ಕಾಂಗ್ರೆಸ್‌ಗೆ ನಿದ್ದೆಗೆಡುವಂತೆ ಮಾಡಿದ್ದರು.

ರಾಜಕೀಯವಾಗಿ ಪ್ರಸ್ತುತ ಕಾಂಗ್ರೆಸ್ ವಶದಲ್ಲಿರುವ ಜಗಳೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಹಾಲಿ ಶಾಸಕ ಎಚ್.ಪಿ.ರಾಜೇಶ ಹಾಗೂ ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಮಧ್ಯೆ ನೇರ ಪೈಪೋಟಿ ಇದೆ. ಜತೆಗೆ, ಕಾಂಗ್ರೆಸ್‌ನಲ್ಲಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಪುಷ್ಪಾಲಕ್ಷ್ಮಣಸ್ವಾಮಿ, ಅರಸೀಕೆರೆ ದೇವೇಂದ್ರಪ್ಪ ಸಹ ಪ್ರಬಲ ಆಕಾಂಕ್ಷಿಗಳಾಗಿದ್ದಾರೆ. ಬಿಜೆಪಿ ಪರಿವರ್ತನಾ ರ‍್ಯಾಲಿಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎಸ್.ವಿ.ರಾಮಚಂದ್ರಪ್ಪ ಅವರ ಹೆಸರನ್ನೇ ಘೋಷಿಸಿರುವುದರಿಂದ ಪಕ್ಷದಲ್ಲಿ ಮತ್ತಾರೂ ಆಕಾಂಕ್ಷಿಗಳಿಲ್ಲ. ಇನ್ನೂ ಜೆಡಿಎಸ್‌ನಿಂದ ಕಳೆದ ಎರಡು ಚುನಾವಣೆಯಲ್ಲಿ ರೈತ ಮುಖಂಡ ಹುಚ್ಚವ್ವನಹಳ್ಳಿ ಸ್ಪರ್ಧಿಸಿ ಎರಡು ಬಾರಿಯೂ ಸೋತಿದ್ದು, ಈ ಬಾರಿ ಜೆಡಿಎಸ್‌ನಿಂದ ಯಾವುದೇ ಟಿಕೆಟ್ ಆಕಾಂಕ್ಷಿ ಹೆಸರು ಕೇಳಿಬಂದಿಲ್ಲ.

ತಾಲೂಕಿನಲ್ಲಿ ಎಸ್ಸಿ, ಎಸ್ಟಿಗಳ ಸಂಖ್ಯೆ ಹೆಚ್ಚಿದ್ದು, ಅವರೇ ನಿರ್ಣಾಯಕರು. ಉಳಿದಂತೆ, ಲಿಂಗಾಯಿತ, ಮುಸ್ಲಿಂ, ಕುರುಬ, ಗೊಲ್ಲರು ಮತ್ತಿತರ ಸಮುದಾಯಗಳಿವೆ. ಪ್ರಸ್ತುತ ಶಾಸಕರಾಗಿರುವ ಎಚ್.ಪಿ. ರಾಜೇಶ್ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಕಡೆಗಣನೆ ಹಾಗೂ ಅನೇಕ ಯೋಜನೆಗಳ ಟೆಂಡರ್‌ಗಳನ್ನು ಏಕಪಕ್ಷೀಯವಾಗಿ ಆಪ್ತರಿಗೆ, ಸಂಬಂಧಿಕರಿಗೆ ಕೊಡಿಸುತ್ತಾರೆ ಎಂಬ ಆರೋಪಗಳ ನಡುವೆಯೂ, ತಾಲೂಕಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮುಂಬರುವ ಚುನಾವಣೆಯ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಬಿಜೆಪಿ ಅಭ್ಯರ್ಥಿ ಎಸ್.ವಿ.ರಾಮಚಂದ್ರ ಅವರು ಸಹ ಪಕ್ಷದಲ್ಲಿ ಮೂಲ ಬಿಜೆಪಿ ಕಾರ್ಯಕರ್ತರನ್ನು ಕಡೆಗಣಿಸುತ್ತಿರುವುದು, ಶಾಸಕ ಎಚ್.ಪಿ.ರಾಜೇಶ್ ಅವರ ಅಭಿವೃದ್ಧಿ ಕಾರ್ಯಗಳು ತುಸು ಹಿನ್ನಡೆಗೆ ಕಾರಣವಾಗಲಿವೆ ಎನ್ನಲಾದರೂ, ತಾವು 2008ರಲ್ಲಿ ಶಾಸಕರಾಗಿದ್ದಾಗ ತಾಲೂಕಿನಲ್ಲಿ ಕೈಗೊಂಡ ಸಾಕಷ್ಟು ಅಭಿವೃದ್ಧಿ ಕೆಲಸಗಳು ಹಾಗೂ ನಿರಂತರ ಪಕ್ಷ ಸಂಘಟನೆ, ಬಿಎಸ್‌ವೈಯೊಂದಿಗಿನ ಆಪ್ತತೆ, ಕಾರ್ಯಕರ್ತರು ಹಾಗೂ ಜನಸಾಮಾನ್ಯರೊಂದಿಗಿನ ನಿರಂತರ ಒಡನಾಟ ಕೈಹಿಡಿಯುವ ಸಾಧ್ಯತೆಗಳು ಹೆಚ್ಚಿವೆ.

ಈ ಹಿಂದಿನ ಚುನಾವಣೆಗಳಲ್ಲಿನ ಬಲಾಬಲ

- 2004ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದಿಂದ ಟಿ.ಗುರುಸಿದ್ದನಗೌಡ ಸ್ಪರ್ಧಿಸಿ ಆರು ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಆಗ ಕಾಂಗ್ರೆಸ್‌ನಿಂದ ಜಿ.ಎಚ್.ಅಶ್ವಥ್ ರೆಡ್ಡಿ ಸ್ಪರ್ಧಿಸಿ ಸೋಲು ಅನುಭವಿಸಿದ್ದರು.
- 2008ರ ವಿಧಾನಸಭಾ ಚುನಾವಣೆಯಲ್ಲಿ ಎಸ್.ವಿ.ರಾಮಚಂದ್ರಪ್ಪ ಕಾಂಗ್ರೆಸ್‌ನಿಂದ ಸ್ಪರ್ಧಿಸಿ 38,664 ಮತಗಳನ್ನು ಪಡೆದು, ಪ್ರತಿಸ್ಪರ್ಧಿ ಬಿಜೆಪಿಯ ಎಚ್.ಪಿ.ರಾಜೇಶ್ (35873) ವಿರುದ್ಧ ಗೆಲುವು ಸಾಧಿಸಿದ್ದರು.
- 2011ರಲ್ಲಿ ಆಪರೇಷನ್ ಕಮಲದಿಂದ ಬೈ ಎಲೆಕ್ಷನ್ ನಡೆಯಿತು. ಆಗ ಬಿಜೆಪಿಯಿಂದ ಎಸ್.ವಿ.ರಾಮಚಂದ್ರಪ್ಪ 41,961 ಮತಗಳನ್ನು ಪಡೆದು, ಕಾಂಗ್ರೆಸ್ ಅಭ್ಯರ್ಥಿ ಎಚ್.ಪಿ.ರಾಜೇಶ್‌ರನ್ನು (37,528) ಪರಾಭವಗೊಳಿಸಿದ್ದರು.
- 2013ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ಪಿ.ರಾಜೇಶ್ 77,805 ಮತಗಳನ್ನು ಪಡೆದು 37 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಕೆಜೆಪಿ ಅಭ್ಯರ್ಥಿ ಎಸ್.ವಿ. ರಾಮಚಂದ್ರ 40,915 ಮತ ಪಡೆದು ಸೋಲು ಅನುಭವಿಸಿದ್ದರು.

ಎಚ್.ಪಿ. ರಾಜೇಶ್

ಎಸ್.ವಿ. ರಾಮಚಂದ್ರ

ಪುಷ್ಪಾಲಕ್ಷ್ಮಣಸ್ವಾಮಿ

ಕೆ.ಪಿ. ಪಾಲಯ್ಯ

ಜಗಳೂರು ಮತದಾರರು

(2017ರ ಅಂಕಿ ಅಂಶ)

ಪುರುಷರು	98,310
ಮಹಿಳೆಯರು	86,418
ತೃತಿಯ ಲಿಂಗಿಗಳು	4
ಒಟ್ಟು ಮತದಾರರು	1, 84,732

ಜಗಳೂರು ಕ್ಷೇತ್ರ ಪ್ರತಿನಿಧಿಸಿದವರು

ವರ್ಷ	ಅಭ್ಯರ್ಥಿಗಳು	ಪಕ್ಷ
1952	ಮುಷೀರ್ ಉಲ್ಲ ಮುಲ್ಕ	ಕೆಎಂಪಿಪಿ
1962	ಎಂ.ಎಸ್.ಕೃಷ್ಣಸಿಂಗ್	ಕಾಂಗ್ರೆಸ್
1967	ಜಿ.ಆರ್.ಹಾಲಸ್ವಾಮಿ	ಕಾಂಗ್ರೆಸ್
1972	ಜಿ.ಎಚ್.ಅಶ್ವಥ್ ರೆಡ್ಡಿ	ಕಾಂಗ್ರೆಸ್
1978	ಜಿ.ಎಚ್.ಅಶ್ವಥ್ ರೆಡ್ಡಿ	ಜನತಾಪಕ್ಷ
1983	ಜಿ.ಎಚ್.ಅಶ್ವಥ್ ರೆಡ್ಡಿ	ಕಾಂಗ್ರೆಸ್
1985	ಜಿ.ಎಚ್.ಅಶ್ವಥ್ ರೆಡ್ಡಿ	ಕಾಂಗ್ರೆಸ್
1989	ಜಿ.ಎಚ್.ಅಶ್ವಥ್ ರೆಡ್ಡಿ	ಕಾಂಗ್ರೆಸ್
1994	ಎಂ. ಬಸಪ್ಪ	ಕೆಸಿಪಿ
1999	ಜಿ.ಎಚ್. ಅಶ್ವಥ್ ರೆಡ್ಡಿ	ಪಕ್ಷೇತರ
2004	ಗುರುಸಿದ್ದನಗೌಡ	ಬಿಜೆಪಿ
2008	ಎಸ್.ವಿ. ರಾಮಚಂದ್ರ	ಕಾಂಗ್ರೆಸ್
2011	ಎಸ್.ವಿ. ರಾಮಚಂದ್ರ	ಬಿಜೆಪಿ
2013	ಎಚ್.ಪಿ. ರಾಜೇಶ್	ಕಾಂಗ್ರೆಸ್

ರಾಹುಲ್ ಎಲ್ಲ ಕ್ಷೇತ್ರಕ್ಕೂ ಬರಲಿ: ಪ್ರತಾಪ್ ಸಿಂಹ

ಮಡಿಕೇರಿ: ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ ರಾಹುಲ್ ಗಾಂಧಿಯವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆತರಬೇಕು. ರಾಹುಲ್ ಕರ್ನಾಟಕದಲ್ಲಿ ಹೆಚ್ಚು ಪ್ರಚಾರ ಕೈಗೊಂಡರೆ ಬಿಜೆಪಿಗೇ ಲಾಭ ಹೆಚ್ಚು. ಅವರು ಚುನಾವಣಾ ಪ್ರಚಾರ ಕೈಗೊಂಡಲ್ಲೆಲ್ಲಾ ಕಾಂಗ್ರೆಸ್ ತಳಮಟ್ಟಕ್ಕೆ ಹೋಗಿದೆ. ಹೀಗಾಗಿ ರಾಜ್ಯಕ್ಕೆ ರಾಹುಲ್ ಗಾಂಧಿ ಪದೇ ಪದೇ ಬರುತ್ತಿರಬೇಕೆಂದು ಸಂಸದ ಪ್ರತಾಪ್ ಸಿಂಹ ವ್ಯಂಗ್ಯವಾಡಿದ್ದಾರೆ. ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರತಾಪ್ ಸಿಂಹ , ರಾಹುಲ್‌ರನ್ನು ರಾಜ್ಯಕ್ಕೆ ಕರೆಸುವ ಮೂಲಕ ಬಿಜೆಪಿಗೆ ಸಿದ್ದರಾಮಯ್ಯ ಉಪಕಾರ ಮಾಡುತ್ತಿದ್ದಾರೆ. ಕಾಂಗ್ರೆಸ್ ಈವರೆಗೂ ರಾಹುಲ್ ಗಾಂಧಿಯವರನ್ನು ಲಾಂಚ್ ಮತ್ತು ರೀ ಲಾಂಚ್ ಮಾಡಿದೆ, ಅದು ನಡೆಯುತ್ತಲೇ ಇದೆ ಎಂದರು. ಗೋವಾ ಚುನಾವಣೆ ಸಂದರ್ಭ ಮಹದಾಯಿ ಹನಿ ನೀರನ್ನು ಬೇರೆಡೆಗೆ ತಿರುಗಿಸುವುದಿಲ್ಲ ಎಂದಿದ್ದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿಯೇ ಮಹದಾಯಿ ಸಮಸ್ಯೆಗೆ ಮೂಲ ಕಾರಣ ಎಂದು ದೂರಿದ ಪ್ರತಾಪ್ ಸಿಂಹ, ಮಹದಾಯಿ ವಿಚಾರಕ್ಕೆ ಸಂಬಂಧಿಸಿದಂತೆ ಸರ್ವಪಕ್ಷ ಒಪ್ಪಿದರೆ ಮಾತ್ರ ಪ್ರಧಾನಿ ಮಧ್ಯಪ್ರವೇಶ ಮಾಡಬಹುದು. ಇದೇ ಕಾರಣವನ್ನು ಈ ಹಿಂದೆಯೇ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ನೀಡಿದ್ದರು. ಮಹಾದಾಯಿ ವಿಚಾರಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ಗೋವಾದ ಕಾಂಗ್ರೆಸ್ ಅಧ್ಯಕ್ಷ ಶಾಂತಾರಾಮ್ ಬಾಯಿಯನ್ನು ಮುಚ್ಚಿಸಲಿ ಎಂದರು.

ಮಹದಾಯಿ ಸಮಸ್ಯೆ ಸೋನಿಯಾ ಗಾಂಧಿ ಅವರ ಪಾಪದ ಕೂಸು ,ತನ್ನ ತಾಯಿಯ ಪಾಪದ ಕೂಸಿನ ಬಗ್ಗೆ ಕರ್ನಾಟಕಕ್ಕೆ ಬಂದಿರುವ ರಾಹುಲ್ ಗಾಂಧಿ ಯಾಕೆ ಮಾತನಾಡುತ್ತಿಲ್ಲ, ನನ್ನ ತಾಯಿಯೇ ಮಹದಾಯಿ ಸಮಸ್ಯೆ ಹುಟ್ಟುಹಾಕಿದ್ದು ಎಂದು ರಾಹುಲ್ ಗಾಂಧಿಯಿಂದ ಸಿದ್ದರಾಮಯ್ಯ ಹೇಳಿಸಲಿ ಎಂದು ಪ್ರತಾಪ್ ಸಿಂಹ ಸವಾಲು ಹಾಕಿದರು.

ಮಂಗಳೂರು ದಕ್ಷಿಣ, ಉತ್ತರ, ಮುಲ್ಕಿ, ಮೂಡುಬಿದಿರೆಯಲ್ಲಿ ಕಣಕ್ಕಿಳಿಯಲು ಚಿಂತನೆ

ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಸಿಪಿಎಂ ತಯಾರು!

ಡೊಂಬಯ್ಯ ಇಡ್ಕಿದು ಮಂಗಳೂರು

ಮಂಗಳೂರು ವಿಧಾನಸಭೆಯ ಎಂಟು ಕ್ಷೇತ್ರಗಳಲ್ಲಿ 4 ಕ್ಷೇತ್ರಗಳಲ್ಲಿ ಸಿಪಿಎಂ ಸ್ಪರ್ಧಿಸಲಿದೆ. ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸಿಪಿಎಂ ಗಮನಾರ್ಹ ಸಾಧನೆ ತೋರದಿದ್ದರೂ ಜನಸಾಮಾನ್ಯರ ಹೋರಾಟದಲ್ಲಿ ಮುಂಚೂಣಿಯಲ್ಲಿದೆ.

ಸಿಪಿಎಂನ ರಾಜ್ಯ ಕಾರ್ಯದರ್ಶಿ ಮಂಗಳೂರಿಗೆ ಭೇಟಿ ನೀಡಿದ ವೇಳೆ ಮಂಗಳೂರು (ಉಳ್ಳಾಲ), ಮಂಗಳೂರು ದಕ್ಷಿಣ, ಮಂಗಳೂರು ಉತ್ತರ, ಮುಲ್ಕಿ ಮತ್ತು ಮೂಡಬಿದ್ರೆ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ ಎಂದು ತಿಳಿಸಿದ್ದರು.

ಮಂಗಳೂರು ದಕ್ಷಿಣದಿಂದ ಸುನೀಲ್ ಕುಮಾರ್, ಉತ್ತರದಿಂದ ಮುನೀರ್ ಕಾಟಿಪಳ್ಳ, ಮೂಡುಬಿದಿರೆ ಯಿಂದ ಯಾದವ ಶೆಟ್ಟಿ ಸ್ಪರ್ಧಿಸುವುದು ಬಹುತೇಖ ಖಚಿತವಾಗಿದ್ದು, ಮಂಗಳೂರು ಉಳ್ಳಾಲ ಕ್ಷೇತ್ರದಿಂದ ಅಭ್ಯರ್ಥಿ ಯಾರೆಂಬುದು ಇನ್ನೂ ನಿರ್ಧಾರವಾಗಿಲ್ಲ. ಇನ್ನೊಂದು ವಾರದಲ್ಲಿ ನಿರ್ಧಾರವಾಗಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಐದು ವರ್ಷದಿಂದ ಕಾರ್ಮಿಕರ ಸಿಪಿಎಂ ಜಿಲ್ಲೆಯಲ್ಲಿ ಹೋರಾಟಗಳಲ್ಲಿ ತೊಡಗಿಸಿಕೊಂಡಿದೆ. ಬೀಡಿ ಕಾರ್ಮಿಕರ ಪರವಾಗಿ ನಡೆಸಿದ ಹೋರಾಟದಿಂದಾಗಿ ಅವರ ವೇತನ ಹೆಚ್ಚಳವಾಗಿದೆ. ಜತೆಗೆ ಕನಿಷ್ಠ ಕೂಲಿ ವೇತನ ಜಾರಿಯಾಗಿದೆ. ಹೋರಾಟದ ಫಲವಾಗಿ ದ.ಕ. ಜಿಲ್ಲೆಯಲ್ಲಿ 11 ಸವಲತ್ತುಗಳು ಜನಸಾಮಾನ್ಯರಿಗೆ ದೊರತಿದೆ. ವೈದ್ಯಕೀಯ, ವಿದ್ಯಾರ್ಥಿವೇತನ, ಅನಾರೋಗ್ಯಕ್ಕೆ ತುತ್ತಾದವರಿಗೆ ನಾಲ್ಕು ಲಕ್ಷ ರು. ಪರಿಹಾರ, ಅಂಗನವಾಡಿ ಕಾರ್ಯಕರ್ತೆಯರ ವೇತನದಲ್ಲಿ ಹೆಚ್ಚಳ, ನಿವೇಶನ ರಹಿತರ ಹೋರಾಟದಿಂದ ಹಕ್ಕು ಪತ್ರ ಮೊದಲಾದ ನಾನಾ ಸೌಲಭ್ಯಗಳು ಜಾರಿಯಾಗಿದೆ ಎಂದು ಸಿಪಿಎಂ ಪಕ್ಷದ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಹೇಳುತ್ತಿದ್ದಾರೆ. ಸಿಪಿಎಂನಲ್ಲಿ ಎಲ್ಲ ಜಾತಿಯವರಿಗೂ ಪ್ರಾಶಸ್ತ್ಯವಿದೆ. ಬಿಲ್ಲವ, ಗಾಣಿಗ, ಕುಂಬಾರ, ಪರಿಶಿಷ್ಟ ಜಾತಿ, ಪಂಗಡ ಮೊದಲಾದವರ ಹೋರಾಟದಲ್ಲಿ ತೊಡಗಿಸಿಕೊಂಡಿದೆ. ಯುವಜನ ರಂಗದಿಂದ ಸೌಹಾರ್ದತೆಗಾಗಿ ಹೋರಾಟ ನಡೆಸಲಾಗಿದೆ ಎಂದಿದ್ದಾರೆ.

ಯಾದವ ಶೆಟ್ಟಿ

ಸುನೀಲ್ ಕುಮಾರ್

ಮುನೀರ್ ಕಾಟಿಪಳ್ಳ

ಸಾಧನೆ ಶೂನ್ಯ!: 2013ರಲ್ಲಿ ಮಂಗಳೂರು (ಉಳ್ಳಾಲ) ಕ್ಷೇತ್ರದಿಂದ ಸ್ಪರ್ಧಿಸಿದ್ದ ಕೆ.ಕೃಷ್ಣಪ್ಪ ಸಾಲ್ಯಾನ್ 3,815 ಮತ ಪಡೆದಿದ್ದರು. ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಸಂತ ಆಚಾರಿ 3,016 ಮತ, ಉತ್ತರ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದ ಎಸ್‌ಡಿಪಿಐ ಗಳಿಸಿದ್ದು ಕೇವಲ 3,323 ಮತಗಳು ಮಾತ್ರ. ಬಿಎಸ್‌ಪಿಯ ಎಂ. ಶಶಿಕಲಾ 1,322 ಮತ ಪಡೆದಿದ್ದು, ಜೆಡಿಯುನ ಸುಪ್ರೀತ್ ಕುಮಾರ್ 745 ಮತ ಪಡೆದಿದ್ದರು. ಉಳ್ಳಾಲ ಕ್ಷೇತ್ರವಿದ್ದಾಗ ರಾಮಚಂದ್ರ ರಾವ್ ಗೆದ್ದಿದ್ದರು. ವಿಟ್ಲ ಕ್ಷೇತ್ರ ಇದ್ದಾಗ ಬಿ.ವಿ.ಕಕ್ಕಿಲ್ಲಾಯರು ವಿಜೇತರಾಗಿದ್ದರು.

ಕೊಣಾಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರೇಕಳ, ಮುನ್ನೂರು, ಅಸೈಗೋಳಿ ಗ್ರಾಮ, ಕೋಟೆಕಾರು ನಗರ ಪಂಚಾಯಿತಿ ವ್ಯಾಪ್ತಿಯ ಉಳ್ಳಾಲ, ಮಂಗಳೂರು ಉತ್ತರ ಕ್ಷೇತ್ರದ ಕುಪ್ಪೆಪದವು, ಮಳಲಿ, ಗಂಜಿಮಠಗಳಲ್ಲಿ ಈಗಲೂ ಸಿಪಿಎಂ ಕಾರ್ಯಕರ್ತರಿರುವುದು ಗಮನಾರ್ಹ.

ಜೆಡಿಎಸ್ ಮೈತ್ರಿ?

ಜೆಡಿಎಸ್ ವರಿಷ್ಠ ಎಚ್. ಡಿ. ದೇವೇಗೌಡ ಎಡಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಚುನಾವಣೆಗೆ ಸ್ಪರ್ಧಿಸುತ್ತೇವೆ ಎಂದು ಮಂಗಳೂರು ಭೇಟಿ ವೇಳೆ ಹೇಳಿಕೆ ನೀಡಿದ್ದರು. ಆದರೆ ಈ ಬಗ್ಗೆ ಇನ್ನೂ ಒಮ್ಮತ ಒಡಮೂಡದಿರುವುದು ಕಾರ್ಯಕರ್ತರ ಗೊಂದಲಕ್ಕೆ ಕಾರಣವಾಗಿದೆ.

ಯುವಕರ ಮತ ಬೇಟೆಗೆ ಸಿದ್ಧತೆ

ಚುನಾವಣೆಗೆ ಸ್ಪರ್ಧಿಸುವವರು ಯುವಕರೇ ಆಗಿರುವುದರಿಂದ ಯುವ ಮತಗಳನ್ನು ಸ್ವಲ್ಪ ಮಟ್ಟಿಗೆ ಬುಟ್ಟಿಗೆ ಹಾಕಿಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆವಂತಿಲ್ಲ. ಮಂಗಳೂರು ನಗರದ ಅಭಿವೃದ್ಧಿ ವಿಷಯವಾಗಿ ಮುನೀರ್ ಕಾಟಿಪಳ್ಳ ಹಾಗೂ ಸುನೀಲ್ ಬಜಾಲ್ ನಿರಂತರ ಹೋರಾಟ ಮಾಡಿದ್ದಾರೆ. ಪಕ್ಷದ ಜನಪರ ಹೋರಾಟಗಳಿಂದಾಗಿ ಮಂಗಳೂರು ನಗರದ ಉತ್ತರ ಹಾಗೂ ದಕ್ಷಿಣದಲ್ಲಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧೆ ನೀಡಲಿದ್ದಾರೆ ಎನ್ನುವುದು ಸಿಪಿಐಎಂ ಕಾರ್ಯಕರ್ತರ ಅಭಿಪ್ರಾಯ.

ಪ್ರಾದೇಶಿಕ ಪಕ್ಷದಿಂದ ಮಾತ್ರ ಅಭಿವೃದ್ಧಿ ಸಾಧ್ಯ

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ನಡೆದ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ಪಾಲಿಕೆ ಸದಸ್ಯ ಕೆ.ವಿ.ಮಲ್ಲೇಶ್ ಮಾತನಾಡಿದರು. ಮರಿತಿಬ್ಬೇಗೌಡ ಮತ್ತಿತರರು ಇದ್ದರು.

ಮೈಸೂರು: ಕಾಂಗ್ರೆಸ್ ಹಾಗೂ ಬಿಜೆಪಿ ದೇಶದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳಾಗಿ ಆಡಳಿತ ನಡೆಸುತ್ತೇವೆ. ಆದರೆ ರಾಜ್ಯದ ನೆಲ, ಜಲ, ಭಾಷೆಯ ವಿಚಾರ ಬಂದಾಗ ಒಬ್ಬರಿಗೊಬ್ಬರು ಬೊಟ್ಟು ಮಾಡಿ ತೋರಿಸುತ್ತಾರೆ. ಈ ಸಮಸ್ಯೆಗೆ ಪರಿಹಾರವನ್ನು ಹುಡುಕುವ ದಾರಿಗೆ ಹೋಗುವುದಿಲ್ಲ. ಎಚ್.ಡಿ.ದೇವೇಗೌಡರು ಇಂದಿಗೂ ನಾಡಿನ ಹಿತಾಸಕ್ತಿಗಾಗಿ ಹೋರಾಟ ನಡೆಸುತ್ತಲೆ ಬರುತ್ತಿದ್ದಾರೆ. ಪ್ರಾದೇಶಿಕ ಪಕ್ಷದಿಂದ ರಾಜ್ಯ ಅಭಿವೃದ್ಧಿ ಸಾಧ್ಯ ಎಂದು ವಿಧಾನಪರಿಷತ್ ಉಪಸಭಾಪತಿ ಮರಿತಿಬ್ಬೇಗೌಡ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದ ಸಭಾಂಗಣದಲ್ಲಿ ನಡೆದ ಬೆಂಗಳೂರಿನಲ್ಲಿ ನಡೆಯುವ ಸಮಾವೇಶದ ಬಗ್ಗೆ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆ.17ರಂದು ನಡೆಯಲಿರುವ ಬೃಹತ್ ಸಮಾವೇಶದಲ್ಲಿ ಜೆಡಿಎಸ್‌ನಿಂದ ಮೊದಲ ಹಂತದಲ್ಲಿ 150 ವಿಧಾನಸಭಾ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಲಿದ್ದು, ಮೈಸೂರು ಜಿಲ್ಲೆಯ ಅಭ್ಯರ್ಥಿಗಳ ಹೆಸರು ಅಂದು ತೀರ್ಮಾನವಾಗಲಿದೆ ಎಂದರು. ಅಂದು ನಡೆಯಲಿರುವ ಸಮಾವೇಶಕ್ಕೆ ಬಿಎಸ್‌ಪಿ ರಾಷ್ಟ್ರಾಧ್ಯಕ್ಷೆ ಮಾಯಾವತಿ ಆಗಮಿಸಲಿದ್ದು, ಮುಂದಿನ ಚುನಾವಣೆಗೆ ಜೆಡಿಎಸ್‌ಗೆ ಬೆಂಬಲ ಸೂಚಿಸಲಿದ್ದಾರೆ. ಅಂದಿನ ಕಾರ್ಯಕ್ರಮಕ್ಕೆ ಕೆ.ಆರ್.ಕ್ಷೇತ್ರದಿಂದ ಸಾರ್ವಜನಿಕರನ್ನು ಕರೆತರಲು ಮುಖಂಡರು, ಕಾರ್ಯಕರ್ತರು ಒಟ್ಟಾಗಿ ಕೆಲಸ ಮಾಡಬೇಕು.

> **ಎಚ್.ಡಿ.ಕುಮಾರಸ್ವಾಮಿ 20 ತಿಂಗಳ ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿ ರಾಜ್ಯದ ಜನತೆಯಿಂದ ಶಹಬ್ಬಾಸ್ ಎನ್ನಿಸಿಕೊಂಡಿದ್ದಾರೆ. ಮತ್ತೊಮ್ಮೆ ಅವರನ್ನು ಸಿಎಂ ಮಾಡಲು ಪಕ್ಷದ ಎಲ್ಲ ಕಾರ್ಯಕರ್ತರು ದುಡಿಯಬೇಕು. ಯಾರಿಗೆ ಟಿಕೆಟ್ ಸಿಗುತ್ತದೆ. ಅವರೊಂದಿಗೆ ಗೆಲುವಿಗಾಗಿ ಎಲ್ಲರು ಶ್ರಮಿಸಬೇಕು. ಪಕ್ಷ ಬಲವರ್ಧನೆಯಾದಷ್ಟು ನಾವು ಬೆಳೆಯುತ್ತೇವೆ.**
> **-ಕೆ.ವಿ.ಮಲ್ಲೇಶ್** ಪಾಲಿಕೆ ಸದಸ್ಯ

ಬಿಜೆಪಿ ಕೊಟ್ಟ ಮಾತಿಗೆ ತಪ್ಪಿದೆ: ಬೋವಿಕುಮಾರ್

ದಾವಣಗೆರೆ: ನಿಮ್ಮನ್ನೇ ಪುರಸಭೆ ಅಧ್ಯಕ್ಷರನ್ನಾಗಿ ಮಾಡುತ್ತೇವೆ ಎಂದು ಅವಿಶ್ವಾಸ ಗೊತ್ತುವಳಿಗೆ ಸಹಿ ಹಾಕಿಕೊಟ್ಟ ಬಿಜೆಪಿ, ಈಗ ನಮಗೆ ಮೋಸ ಮಾಡಿದೆ ಎಂದು ಮಲೇಬೆನ್ನೂರು ಕಾಂಗ್ರೆಸ್ ಮುಖಂಡ ಬೋವಿಕುಮಾರ್ ಆರೋಪಿಸಿದರು.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿ, ಮಲೇಬೆನ್ನೂರು ಪುರಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎಸ್ಸಿ ಮಹಿಳಾ ಮೀಸಲು ನಿಗದಿಯಾಗಿದ್ದು, ಕಾಂಗ್ರೆಸ್ ಎಂಟು, ಬಿಜೆಪಿ ಏಳು, ಜೆಡಿಎಸ್ ಐದು, ಪಕ್ಷೇತರರು ಮೂರು ಸೇರಿದಂತೆ ಒಟ್ಟು 23 ಸದಸ್ಯರಿದ್ದಾರೆ. ಬಿಜೆಪಿ, ಜೆಡಿಎಸ್ ಮೈತ್ರಿಯಿಂದ ಜೆಡಿಎಸ್‌ನ ಅಂಜಿನಮ್ಮ ಅವರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಇತ್ತೀಚೆಗೆ ಬಿಜೆಪಿ ಮುಖಂಡರು ನನ್ನನ್ನು ಕರೆದು ನನ್ನ ಪತ್ನಿ ಮಂಜುಳಾಗೆ ಬೆಂಬಲ ನೀಡುತ್ತೇವೆ. ಜೆಡಿಎಸ್‌ನ ಶಾಸಕರ ದುರಾಡಳಿತ ಮೀತಿ ಮೀರಿದೆ ಹಾಗೂ ಮನೆ ಹಂಚಿಕೆಯಲ್ಲಿ ಅನ್ಯಾಯ ಮಾಡುತ್ತಿದ್ದಾರೆ. ಹೀಗಾಗಿ, ನಾವು ಮಲೇಬೆನ್ನೂರು ಪುರಸಭೆ ಅಧ್ಯಕ್ಷರಿಗೆ ನೀಡಿರುವ ಬೆಂಬಲ ವಾಪಾಸ್ ಪಡೆದು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತೇವೆ ಎಂದು ಹೇಳಿ ಅವಿಶ್ವಾಸ ಗೊತ್ತುವಳಿಗೆ ಸಹಿ ಮಾಡಿಕೊಟ್ಟಿದ್ದಾರೆ. ಅದರಂತೆ ನಾನು ಕೂಡ ಪಕ್ಷೇತರ ಸದಸ್ಯರನ್ನು ಪ್ರವಾಸ ಕಳುಹಿಸಿ ಅವಿಶ್ವಾಸ ಗೊತ್ತುವಳಿಗೆ ಲಕ್ಷಾಂತರ ಹಣ ಖರ್ಚು ಮಾಡಿಕೊಂಡಿದ್ದೇನೆ. ನಾಳೆ ಅವಿಶ್ವಾಸ ಗೊತ್ತುವಳಿ ದಿನಾಂಕ ನಿಗದಿಯಾಗಿದೆ. ಆದರೆ, ಇದೀಗ ಜಿಪಂ ಸದಸ್ಯ ವಾಗೀಶ್ ಸ್ವಾಮಿ ನಾವು ನಿಮಗೆ ಬೆಂಬಲಿಸಲ್ಲ ಎನ್ನುತ್ತಿದ್ದು, ಹಾರಿಕೆ ಉತ್ತರ ನೀಡುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಕೊಟ್ಟ ಮಾತಿನಂತೆ ನಡೆದುಕೊಳ್ಳದೆ ಬಿಜೆಪಿ ನಮಗೆ ವಂಚನೆ ಮಾಡಿ ಲಕ್ಷಾಂತರ ರು. ಹಣ ಖರ್ಚು ಮಾಡಿಸಿದೆ. ಇಂತಹ ಅನ್ಯಾಯ ಯಾರಿಗೂ ಆಗಬಾರದು. ಸುಮ್ಮನೆ ಇದ್ದ ನನ್ನನ್ನು ಕರೆದು ಈ ರೀತಿ ವಂಚನೆ ಮಾಡಿರುವುದು ಖಂಡನೀಯ. ಹೇಳಿದ ಮಾತಿನಂತೆ ನಡೆದುಕೊಳ್ಳದೆ ಇರುವ ಬಿಜೆಪಿಯವರಿಗೆ ತಕ್ಕಶಾಸ್ತಿಯಾಗಬೇಕೆಂದು ತಮ್ಮ ಅಳಲು ತೋಡಿಕೊಂಡರು. ಈ ಸಂದರ್ಭ ಪುರಸಭೆ ಸದಸ್ಯೆ ಹಾಗೂ ಪತ್ನಿ ಮಂಜುಳ ಇದ್ದರು.

ಶಾ ಗೆ ಹೆದ್ರುಕೊಂಡು ಸ್ಲಂಗೆ ಹೋಗಿದ್ದೋವ್ರ ಶೇಪ್ ಔಟ್ ಆಯ್ತಂತೆ !



ವೆಂಕಟೇಶ ಆರ್.ದಾಸ್

ಹಳ್ಳಿ ಕಟ್ಟೆ

ಲೇ ಸೀನ, ಗದ್ದೆಗೆ ರಾತ್ರಿ ನೀರ್ ಕಟ್ಟಕ್ಕೆ ಹೋಗಾನ ಅಂತ ಕರೆಯಕ್ ಬಂದಿದ್ದೆ, ಇರ್ಲಿಲ್ವಲ್ಲಾ ಎಲ್ಲಲಾ ಹೋಗಿದ್ದೆ? ಅಂತ ಪಟೇಲಪ್ಪ ಆಗ್ ತಾನೇ ಅರಳಿ ಕಟ್ಟೆ ಕಡೆಗೆ ಬತ್ತಿದ್ದ ಸೀನಂಗೆ ಕೇಳ್ದ. ಪಟೇಲಪ್ಪನ್ ಮಾತ್ಗೆ ನಾಚ್ಕೋತ್ತ ಉತ್ರ ಕೊಟ್ಟ ಸೀನ 'ನೆನ್ನೆ ರಾತ್ರಿ ನಂದು ಅತ್ತಿಹಳ್ಳಿ ಅತ್ತೆ ಮನೀಲಿ ವಾಸ್ತವ್ಯ ಕಣ್ ದೊಡ್ಡಪ್ಪ' ಅಂದ.

ಏನ್ಲಾ, ಅತ್ತೆ ಮನೆ ಸೇರ್ಕಂಬುಟ್ಟಿದ್ದೆ ಅನ್ನು, ಏನಂದ್ಲು ನಿಮ್ಮತ್ತೆ, 'ನಾಚ್ಕಿಲ್ಲದ ಅಳಿಯ ನಾಗ್ರಬ್ಬಕ್ ಬಂದವ್ನೆ' ಅಂತ ಮೊಕ್ಕುಗಿಲಿಲ್ವಾ. ಹೋಗ್ಲಿ ಕೊಟ್ಟಳಂತ ಮಗ್ಳನ್ನ? ಅಂತ ರೇಗಿಸ್ದ ಪಟೇಲಪ್ಪ. ನಾನೇನ್ ಮದ್ವೆ ಇಚಾರ ಮಾತಾಡಕ್ ಹೋಗಿದ್ನೆ? ಅದನ್ನು ನೀನು, ನಮ್ಮಪ್ಪು ಹೋಗಿ ಮಾತಾಡ್ಬೇಕಪ್ಪ. ಅಪ್ರೂಪಕ್ಕೆ ಅಳಿಯ ಬಂದವ್ನೇ ಅಂತ ನಮ್ಮತ್ತೆ ಚೆನ್ನಾಗ್ ಮಾಡಿಕ್ಕಿದ್ಲು. ಉಂಡು ರಾತ್ರಿ ಉಳ್ಕಂಡಿದ್ ಬಂದೆ ಕಣೇಳು ಅಂದ ಸೀನ.

ಓ, ಹಂಗೆ, 'ಶಾ' ಗೆ ಹೆದ್ರಿಕಂಡು ಸ್ಲಂನಲ್ಲಿ ಉಳ್ಕಳ್ಕೋಗಿದ್ರಲ್ಲ ಬಿಜೆಪಿನೋರು, ಹಂಗೆಯಾ ನಿನ್ನ ಕಥೆ. ನೆಪಕ್ ಮಾತ್ರ ವಾಸ್ತವ್ಯ ಅನ್ನು ಅಂದ ಪಟೇಲಪ್ಪ. ದೊಡ್ಡಪ್ಪ, ಬಿಜೆಪಿನೋರು ಶಾ ಬೊಯ್ತರಲ್ಲ ಅಂತ ಸ್ಲಂ ವಾಸ್ತವ್ಯ ಮಾಡಕ್ಕೋಗಿ ಶೇಪ್ ಔಟ್ ಮಾಡ್ಕಂಡವ್ರಂತೆ. ಹೆಸ್ರಿಗ್ ಮಾತ್ರ ಸ್ಲಂ ಆಯ್ಕೆ ಮಾಡ್ಕಂಡು ಐಟೆಕ್ ಮನೇಗೋಗಿ ಮಲಗಿದ್ದು ಎದ್ ಬಂದ್ರಂತೆ ಅಂದ ಸೀನ.ಏನ್ಲಾ ಹೇಳ್ತಿದ್ದಿಯಾ, ಶಾಗ್ಯಾಕ್ಲ ಇವು ಈ ಪಾಟಿ ಹೆದ್ರುಕತ್ತವೆ? ಆ ವಯ್ಯ ಬತ್ತನೇ ಅಂದ್ರೆ, ಸಾಕು ಬೀಜ ಕಿತ್ತ ಹೋರಿಯಂಗ್ ಬೆಂಡಾಗ್ಬುಡ್ತವೆ. ಮೋದಿ ಅಂದ್ರೆ ವಸಿ ನೆಟ್ಟಗಾರ ನಿಂತ್ಕತಾರೆ. ಆದ್ರೆ ಶಾ ಅಂತಿದ್ದಂಗೆ ಬಗ್ಗಿ ಹೋಗ್ತವೆ ಬಡ್ಡಿವು ಅಂದ ಪಟೇಲಪ್ಪ. ಹಂಗದೆ ಕಣ್ ದೊಡ್ಡಪ್ಪ ಶಾ ಪವರ್‍ರು. ಮೋದಿನ ಬೇಕಾದ್ರೆ ಎದ್ರಾಕಾಬೋದು. ಆದ್ರೆ, ಶಾ ಎದ್ರಾಕೊಂಡ್ರೆ ಬಿಜೆಪಿವು ಬದ್ಕಕ್ಕಾಯ್ತದಾ? ಆ ವಯ್ಯ ಮನ್ಸ್ ಮಾಡಿದ್ರೆ, ಒಂದೂ, ಸೀಟಿಗ್ ಸಂಚ್ಕಾರ ಬತ್ತದೆ. ಇಲ್ಲ ಐಟಿ, ಪೈಟಿಯವ್ರು ಬಂದ್ ಅಟ್ಕಾಯಿಸ್ಕತ್ತರೆ. ಇದ್ಯಾಕಪ್ಪ ಸವಾಸ ಅಂತ ಮೊದ್ಲೆ ಹುಸಾರಾಯ್ತುರೆ ಇವ್ರು ಅಂದ ಸೀನ.

ಅದ್ಸರಿ ಕಣ್ಲಾ, ಬ್ಯಾರ್-ಬ್ಯಾರೆ ಬೇಜಾನ್ ಕೆಲ್ಸ ಇರೋ ಟೈಮಲ್ಲಿ ಎಲ್ಲ ಹೋಗಿ ಸ್ಲಂ ಅಲ್ಲಿ ಕುತ್ಕತ್ತಾವಲ್ಲ ಯಾಕ್ಲಾ? ಹಿಂಗೋಗಿ ಅಂತೇಳಕ್ ಆ ವಯ್ಯ ದಡ್ನೇ ಅಂದ ಪಟೇಲಪ್ಪ. ಅವ್ನ್ಯಾಕ್ ದಡ್ಡಾದನೇಳು, ಶಾ ಅಂದ್ರೆ ಚಾಣಕ್ಯ ಇದ್ದಂಗೆ. ಕರ್ನಾಟಕದಲ್ಲಿ ದಲಿತ್ರು ಬಿಜೆಪಿಗ್ ಕೈ ಕೊಡದ್ ಗಟ್ಟಿಯಾತ್ಯೆತೆ, ಅದಕ್ಕೆ ಮೊದ್ಲು ಸ್ಲಂ ವಾಸ್ತವ್ಯ ಮುಂದುವರಿಸ್ರಿ ಅಂತೇಳೈತಂತೆ. ಅದಕ್ಕೆ ಹಳೇ ಬೆಡ್ ಶೀಟ್, ಗಿಡ್‌ಶೀಟ್ ಎಲ್ಲ ಕೊಡಿವ್ಕೊಂಡು ಸ್ಲಂ ಕಡಿಗೊಂಟವ್ರಂತೆ ಬಿಜೆಪಿನೋರು ಅಂದ ಸೀನ.

ಅದ್ಯಾಕ್ಲಾ ದಲಿತ್ರು ಬಿಜೆಪಿಗೋಟಾಕಕಿಲ್ಲ, ಕಾಂಗ್ರೆಸ್ ದಲಿತ್ರು ಸಿಎಂ ಮಾಡ್ಲಿಲ್ಲ ಅನ್ನೋ ಸಿಟ್ನಲ್ಲಿ ಒತ್ತಿದ್ರೆ, ಬಿಜೆಪಿಗೆ ಅಲ್ವೇ ಲಾಭ ಅಂದ ಪಟೇಲಪ್ಪ. ಹೂಂ, ಒತ್ತುತಾರೆ, ಇಂತವೆಲ್ಲ ಎನ್‌ಕ್ಯಾಶ್ ಮಾಡ್ಕೊಳ್ಳೋಕೆ ನಮ್ಮಲ್ಲಿ 'ಚಾಣಕ್ಯನ್ ಅಪ್ಪನಂತೋರ್' ಇಲ್ವೇ. ಕಾಂಗ್ರೆಸ್ ಮೇಲಂತೂ ದಲಿತ್ರಿಗೆ ಸಿಟ್ಟೈತೆ. ಇನ್ ಬಿಜೆಪಿನೋವ್ ಮಾಡಿರೋ ಅವಾಂತ್ರಕ್ಕೆ ಅವ್ರತ್ರನೋ ಹೋಗ್ಬಾರದು ಅಂತಿರೋ ದಲಿತ್ರನ್ನ ಕ್ಯಾಚ್ ಹಾಕಳ್ಳಕ್ಕೆ ಅಂತಾನೆ ಬಿಎಸ್ಪಿ ಜತೆ ಮೈತ್ರಿ ಮಾಡ್ಕಂಡಿಲ್ವೇ ದೊಡ್ಡ ಗೌಡ್ರು, ಅವ್ರ ಆಟದ್ ಮುಂದೆ ಕೆಲವು ಸಲ ಯಾವ್ ಚಾಣಕ್ಯನ್ ತಂತ್ರಾನೂ ನಡಯಕ್ಕಿಲ್ಲ ಗೊತ್ತಾ ಅಂದ ಸೀನ. ಲೇ, ತೆನೆ ಹೊತ್ತ ಲೇಡಿನಾ ಆನೆ ಮೇಲ್ ಕೂರಸದ್ಕೂ, ಬಿಜೆನೋರ್ ಹೋಗಿ ಸ್ಲಂನಲ್ಲಿ ಮಲ್ಗೋದ್ಕು ಸಂಬಂಧ ಏನ್ಲಾ ಸೀನ ಅಂದ ಪಟೇಲಪ್ಪ. ಐತೆ ದೊಡ್ಡಪ್ಪ, ದಲಿತ್ರು ಕಾಂಗ್ರೆಸ್ ಮ್ಯಾಲೆ ಸಿಟ್ಟಾಗಿದ್ದನ್ನು ಎನ್‌ಕ್ಯಾಶ್ ಮಾಡ್ಕಳ್ಳದ್ ಬುಟ್ಟು ಅನಂತ್ ಕುಮಾರ ಹೆಗ್ಡೆ ಬಾಯಿಗ್ ಬಂದಾಗ್ ಮಾತಾಡ್ತು. ಸಂವಿಧಾನ ಚೇಂಜ್ ಮಾಡ್ತೀನಿ ಅಂತು, ಅದನ್ನು ವಿರೋಧ ಮಾಡಿದ್ ದಲಿತ್ರನ್ನ ನಾಯ್ಗೋಳು ಅಂತು. ಹಿಂಗೆ ಆದ್ರೆ ನಮ್ಗೇ ಡ್ಯಾಮೇಜ್ ಆಗದ್ ಗ್ಯಾರಂಟಿ. ಮೊದ್ಲು ಯಾವ್ದಾದ್ರು ಡ್ರಾಮ ಮಾಡಿ ಅಂತ ಹೈಕಮಾಂಡ್ ಹೇಳ್ತಿದ್ದಂಗೆ ಸ್ಲಂನಲ್ಲಿ ಹೋಗಿ ಚಾಪೆ ಹಾಸವ್ರೆ ನಮ್ಮ ಯಡಿಯೂಪ್ಪನೋರು ಅಂದ ಸೀನ.

ಶೆಟ್ರೇನೋ ಫುಲ್ ಹೈಟೆಕ್ ವ್ಯವಸ್ಥೆ ಇರೋ ಸ್ಲಂನಲ್ಲಿ ನೆಪಕ್ಕೋಗಿ ಯಾವ್ದೋ ಮುಖಂಡನ್ ಮನೇಲಿ ಮಲ್ಗಿದ್ದು ಎದ್ದು ಬಂದೈವ್ರಂತೆ. ಇವ್ರು ವಾಸ್ತವ್ಯ ಎಲ್ಲ ಓಳು ಅಂತ ಆಡ್ಕತ್ತಿದ್ದೋರ್ಗೆ ಹಾಸ್ಕೊಟ್ಟಂಗಾಯ್ತು ಇದು ಅಂದ ಪಟೇಲಪ್ಪ. ಆ ವಯ್ಯ ಹೈಟೆಕ್ ಸ್ಲಂನಲ್ಲಿ ಮಲ್ಗೈತೆ, ನಮ್ಮ ಯಡ್ಡಿ ಗಾಂಧಿ ನಗರ ಸ್ಲಂನಲ್ಲಿ ಹೋಗಿ ನಿಮ್ಗೇನೇನ್ ಆಗ್ಬೇಕ್ ಹೇಳಿ, ನೆಕ್ಸ್ಟ್ ನಾನೇ ಸಿಎಂ ಆಗೋದು, ಆಗ ಎಲ್ಲ ನಾನೇ ಮಾಡ್ಕೊಡ್ತಿನಿ ಅಂತ ಚೀಟಿ ಇಸ್ಕಂಡ್ ಬಂದೈತೆ. ಕ್ಯಾತಮಾರನಹಳ್ಳಿ ಸ್ಲಂನಲ್ಲಿ ಮಲ್ಗಿದ್ದ ಶೋಭಾ ಮೇಡಂಗೆ ತಿಗ್ಣೆ ಕಚ್ತೋ ಏನೋ ರಾತ್ರೆಲ್ಲ ಶಾನೆ ಒದ್ದಾಡಿದ್ರಂತೆ. ವತ್ತಾರೆ ಹೊತ್ಗೆ ಮೈಕೈಯೆಲ್ಲ ನೋವಾಗಿ ಇನ್ನೊಂದ್ ವಾರ ನಾನ್ ಯಾವ್ ಕಾರ್ಯಕ್ರಮಕ್ಕೂ ಬರಂಗಿಲ್ಲ ಅಂತ ಕಾರ್ ಹತ್ತಿದ್ರಂತೆ. ಕಾರ್ ಯಾಕೋ ಕೇರಳ್ದ ಕಡೆ ಹೋಯ್ತು ಅಂತಿದ್ರು, ನೋಡ್ದೋರು ಅಂದ ಸೀನ.

ಹೂಂ ಕನ್ ಬುಡ್ಲಾ, ಇನ್ನೇನು ದಿನ ಒಳ್ಳೊಳ್ಳೆ ಹಾಸ್ಗೆ ಮ್ಯಾಲ್ ಮಲ್ಗಿದ್ ಮಂದಿಗೆ ಚಾಪೆಮ್ಯಾಲ್ ಹೆಂಗ್ಲಾ ನಿದ್ದೆ ಹತ್ತದೆ. ಅದ್ರಲ್ಲೂ ಜಾಗ ಬ್ಯಾರೆ ಹೊಸ್ದು. ಹಿಂಗಾಗಿ, ಹಂಗಾಗಿರ್ಬೇಕ್ ಬುಡು. ಹೋಗ್ಲಿ ಇದ್ರಿಂದ ಏನಾರ ಬಿಜೆಪಿಗೆ ಓಟ್ ಬೀಳ್ತವಾ ಅಂದ ಪಟೇಲಪ್ಪ. ಎಲ್ಲಿ ಬೀಳ್ತಾವೆ ಹೇಳು, ದೂರದಿಂದ ನೋಡ್ದೋ ನಮ್ಗೇ ಅವ್ರು ಮಾಡದ್ ನಾಟ್ಕ ಅಂತ ಗೊತ್ತಾಯ್ತದೆ. ಇನ್ನ ಅವ್ರು ಮಲ್ಗೋ ಜಾಗ್ದಲ್ಲೇ ಇದ್ದೋರಿಗ್ ಗೊತ್ತಾಗಲ್ವೆ. ಇಂಥ ಆಟ್ಗೊಳ್ನೆಲ್ಲ ಅವ್ರು ಪಾಪ ಎಪ್ಪತ್ತೊರ್ಷದಿಂದ್ ಎಷ್ಟು ನೋಡಿಲ್ಲ. ಯಾವಾನಾರ ಉದ್ಧಾರ ಮಾಡವ್ನಾ? ಇದೆಲ್ಲ ಗೊತ್ತಿರೋ ಅವ್ರು, ಮಾಡ್ವಾಗ್ ಸರಿಯಾಗೇ ಮಾಡ್ತಾರೆ ಕಣ್ ಬಾ ಅಂದ ಸೀನ.

ಏನೋಪ್ಪ ಎಲೆಕ್ಷನ್ ಹತ್ರ ಬಂದ್ರು ಸಾಕು, ನಮ್ಮ ಹಳ್ಳಿಲಿ ಬ್ಯಾಸ್ಗೆ ಟೈಮಲ್ಲಿ ಊರೂರಲ್ಲೂ ಶುರುವಕ್ಕತ್ತಿದ್ರಲ್ಲ ಹಂಗೆ ನಾಟಕಗೋಳ ಶುರುವಕ್ಕತ್ತಾರೆ. ಅದನ್ನ ನೋಡೋಕೆ ಮತ್ತೇ ಜನ್ರಿಗ್ ತೋರ್ಸಕ್ಕೆ ಮೀಡಿಯಾದವ್ರೂ ಸ್ಲಂನಲ್ಲೇ ಮಲಗ್ಬೇಕಾದ್ ಪರಿಸ್ಥಿತಿ ಬಂದದೆ. ಆದ್ರೆ, ಸತ್ಯ ಜನಕ್ಕೂ ಗೊತ್ತು, ಮೀಡಿಯಾದವ್ರಿಗೂ ಗೊತ್ತು. ಏನ್ಮಾಡ್ತಿಯಾ, ಹೇಳಂಗಿಲ್ಲ-ಬಿಡಂಗಿಲ್ಲ. 'ಬಾಯ್ಬುಟ್ರೆ ಬಣ್ಗೇಡು' ಅಂದವ್ನೇ ಪಕ್ಕದೂರ್‌ಗೆ ಹೋಗ್ ಬತ್ತೀನಿ ಇರ್ಲಾ ಅಂತ ಹೊಂಟ ಪಟೇಲಪ್ಪ. ನಾನೇನೋ ವಯ್ಸು ಹುಡ್ಗ, ಅತ್ತೆ ಮನೆಗೋಗಿದ್ದೆ. ನೀನೆತ್ತಗೊಂಟ್ಯಪ್ಪ ವಾಸ್ತವ್ಯ ಮಾಡಕ್ಕೆ? ಯಾವ್ದಾರ ಬ್ರಾಂಚ್ ಆಫೀಸ್ ಐತಾ ಹೆಂಗೆ? ತಡಿ ದೊಡವ್ವಂಗ್ ಹೇಳ್ತಿನಿ ಅಂದ ಸೀನ.

ಲೇ, ಮೂದೇವಿ ಮುಂಡೆಗಂಡ, ಆ ಗೂಡೇಮಾರನಹಳ್ಳಿ ಗಡಾರಿ ಗಿಡ್ನ ಡ್ಗ ದುಡ್ಡಿಸ್ಕೊಂಡು ಎರಡ್ ವರ್ಷ ಆಗದೆ. ಇವತ್ತು ಕೊಡ್ತೀನಿ ಅಂತೇಳವ್ನೆ. ಅದಕ್ಕೋಯ್ತಾ ಇವ್ನಿ. ಹಂಗೇನಾರಾ ನಿಮ್ ದೊಡವ್ವಂಗೂ ನಂಗೂ ತಂದಾಕುಬ್ಟಿಯಾ ಕಳ್ ನನ್ಮಗನೆ ಅಂತ ಪಂಚೆ ಮ್ಯಾಕ್ ಎತ್ಕೊಂಡ್ ಪಂಚಾಯಿತಿ ಕಟ್ಟೆ ಇಳಿದ್ ಹೊಂಟ ಪಟೇಲಪ್ಪ.